# ಆಧುನಿಕ ಭಾರತದಲ್ಲಿ ಬಸವಣ್ಣನವರ ಸಾಮಾಜಿಕ ಸಮಾನತೆಯ ಅನ್ವಯಿಕ ವಿಚಾರಗಳು

**ಡಾ.ಶಿವರಾಜ ಯತಗಲ್**
ಕನ್ನಡ ಅಧ್ಯಯನ ವಿಭಾಗ
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
ಮೊ: ೯೦೧೯೮೬೭೮೮೬, ೮೬೬೦೮೨೭೭೦೫

೨೧ನೇ ಶತಮಾನದ ಎರಡನೇ ದಶಕದಲ್ಲಿ ನಮ್ಮ ದೇಶ ವಿಶ್ವಭೂಪಟದಲ್ಲಿ ಎದ್ದು ಕಾಣುವ ಬಹುದೊಡ್ಡ ಪ್ರಜಾಪ್ರಭುತ್ವ ದೇಶವಾಗಿ ಯಶಸ್ವಿಯಾಗಿ ಮುನ್ನಡೆದಿದೆ. ಆದರೆ ಪ್ರಜಾಪ್ರಭುತ್ವದ ತತ್ವಗಳು ಅಕ್ಷರಶಃ ಅನುಷ್ಠಾನಗೊಂಡಿವೆಯೇ? ಎಂದು ಪ್ರಶ್ನಿಸಿದರೆ ಖಂಡಿತ ಇಲ್ಲವೆಂಬುದೇ ಉತ್ತರ. ಸಂವಿಧಾನದಲ್ಲಿ ಸಮಾನತೆಯ ಬಗ್ಗೆ ಹೇಳಿದ್ದರೂ ಕಾರ್ಯರೂಪದಲ್ಲಿ ಸಾಮಾಜಿಕ ಅಸಮಾನತೆ ಕಣ್ಣಿಗೆ ರಾಚುವಷ್ಟು ಢಾಳಾಗಿ ಹೊಡೆಯುತ್ತಿದೆ. ಜಾತಿಭೇದ, ಲಿಂಗಭೇದ, ವೃತ್ತಿಭೇದ, ಭ್ರಷ್ಟಾಚಾರ ಆಧುನಿಕ ಭಾರತಕ್ಕೆ ಸಮಸ್ಯೆಗಳಾಗಿ ಕಾಡುತ್ತಿವೆ. ಅಪ್ರಾಮಾಣಿಕತೆ, ಭ್ರಷ್ಟಾಚಾರ, ಜಾತೀಯತೆ, ಮಹಿಳಾ ದೌರ್ಜನ್ಯ ಎಂದಿಗಿಂತಲೂ ಇಂದು ಮತ್ತಷ್ಟು ಹೆಚ್ಚಾಗಿಯೇ ತಲೆಯೆತ್ತಿದೆ. ಸಮಾನತೆ ಎಂಬುದು ಒಂದು ಆದರ್ಶವೇ ಹೊರತು ವಾಸ್ತವವಲ್ಲ ಎಂಬ ಅಸಹಾಯಕತೆಗೆ ತಂದು ನಿಲ್ಲಿಸಿವೆ. ವೈಜ್ಞಾನಿಕವಾಗಿ ಆರ್ಥಿಕವಾಗಿ ಸಾಕಷ್ಟು ಮುನ್ನಡೆಯುತ್ತಿರುವ ನಮ್ಮ ದೇಶ ಇಂತಹ ಸಾಮಾಜಿಕ ಅಸಮಾನತೆಯಲ್ಲಿ ನಲುಗುತ್ತಿದೆ. ೧೨ನೇ ಶತಮಾನದಲ್ಲಿ ಬಸವಣ್ಣನವರ ಸಾಮಾಜಿಕ ಸಮಾನತೆಯ ವಿಚಾರಗಳು ಇಂದು ಪ್ರಸ್ತುತವೂ ಅನುಷ್ಠಾನಯೋಗ್ಯವೂ ಆಗಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಬಸವಣ್ಣನವರ ಕಾಯಕ ಮತ್ತು ದಾಸೋಹ ತತ್ವಗಳ ಅನುಷ್ಠಾನದಿಂದ ಆರ್ಥಿಕ ಅಸಮಾನತೆ ಸಾಮಾಜಿಕ ಅಸಮಾನತೆಗಳು ಹೇಳ ಹೆಸರಿಲ್ಲದಂತೆ ತೊಲಗುವವಲ್ಲದೆ ವೃತ್ತಿಗೌರವ ಪ್ರಾಪ್ತವಾಗುವುದು. ಕಾಯಕ ದುಡಿಮೆಯನ್ನು ಮಾತ್ರ ಪ್ರತಿಪಾದಿಸದೆ ಸತ್ಯಶುದ್ಧತೆಯನ್ನು ಕಡ್ಡಾಯಗೊಳಿಸುವುದು. ದಾಸೋಹ ಸಮಾಜದಲ್ಲಿ ದುಡಿಯಲಾಗದವರನ್ನು ಪೋಷಿಸುವ ಹೊಣೆಗಾರಿಕೆಯನ್ನು ಹೇಳುವುದು. ಈ ಎರಡೂ ತತ್ವಗಳು ಕಾರ್ಯರೂಪದಲ್ಲಿ ಬಂದರೆ ಸುಂದರ ಸಮಾಜ ಸಮಾನತೆಯ ಸಮಾಜ, ರೂಪುಗೊಳ್ಳುವುದರಲ್ಲಿ ಸಂದೇಹವಿಲ್ಲ.

**ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ**
**ಇಂದಿಂಗೆ ನಾಳಿಂಗೆ ಬೇಕೆಂದೆನಾದೊಡೆ ನಿಮ್ಮಾಣೆ**
**ನಿಮ್ಮ ಪ್ರಮಥರಾಣೆ, ನಿಮ್ಮ ಶರಣರಿಗಲ್ಲದೆ**
**ಮತ್ತೊಂದನರಿಯೆ ಕೂಡಲಸಂಗಮದೇವ**

ಎನ್ನುತ್ತಾರೆ ಶರಣರು. ಆದರೆ ಇಂದು ಯಾವುದೇ ದುಡಿಮೆ ಕಾಯಕವಾಗುತ್ತಿಲ್ಲ ಸ್ವಾರ್ಥ ಅಪ್ರಾಮಾಣಿಕತೆ ಭ್ರಷ್ಟಾಚಾರಗಳು ಎಲ್ಲ ಸ್ತರದಲ್ಲೂ ಎಲ್ಲ ಕ್ಷೇತ್ರದಲ್ಲೂ ಕ್ಯಾನ್ಸರ್ ರೋಗ ಕಣಗಳಂತೆ ತುಂಬಿಕೊಂಡಿವೆ. ಸಹಜವಾಗಿಯೇ ಸಾಮಾಜಿಕ ಸಮಾನತೆ ಎಂಬುದು ಮರೀಚಿಕೆಯಾಗಿ ಕೆಡುಕನ್ನೇ ಅಪ್ಪಿಕೊಂಡು ಸುಖಿಸುವ ದುಡ್ಡಿನ ದಾಹಿಗಳು ಧನಪಿಶಾಚಿಗಳು ನಮ್ಮ ದೇಶದಲ್ಲಿ ಹೇರಳವಾಗಿ ಕಾಣಸಿಗುತ್ತಾರೆ. ದೇಶದ ಸಂಪತ್ತು ಕೆಲವೇ ಜನರ ಕೈಯಲ್ಲಿ ಸಿಲುಕಿದೆ. ದುಡಿಯುವ ರೈತ ಬದುಕಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವುದು ಒಂದೆಡೆಯಾದರೆ ದುಡಿಯದ ದುರುಳರು ಕೋಟಿಗಟ್ಟಲೆ ಹಣ ಗಳಿಸಿಕೊಂಡು ಬೀಗುತ್ತಿದ್ದಾರೆ. ಇದಕ್ಕೆಲ್ಲ ಒಂದೇ ಔಷದ–ಸಿದ್ಧೌಷದ–ಎಂದರೆ ಶರಣರು ರೂಪಿಸಿಕೊಟ್ಟ ಅಮೂಲ್ಯವಾದ ಎರಡು ತತ್ವಗಳು–ಕಾಯಕ ಮತ್ತು ದಾಸೋಹ. ಕಾಯಕ ಎಂದಾಕ್ಷಣ ಮಾಡುವ ವೃತ್ತಿ

ಯಾವುದೇ ಇರಲಿ ಅಲ್ಲಿ ನಿರ್ವಂಚನೆ ಪ್ರಾಮಾಣಿಕತೆಗಳು ಬರಲೇಬೇಕು. ದಾಸೋಹ ಎಂದೊಡನೆ ಸಂಪಾದಿಸಿಡುವ ಸಂಗ್ರಹ ಬುದ್ಧಿಗೆ ಕೊಡಲಿಪೆಟ್ಟು ಬೀಳುವುದು 'ಪರಧನವಲ್ಲೆನೆಂಬ ಛಲ' ಬಂದರೆ ಭ್ರಷ್ಟಾಚಾರಕ್ಕೆ ನೆಲೆ ಎಲ್ಲಿದೆ? ಸಾಮಾಜಿಕ ಸಮಾನತೆ ತಾನಾಗಿಯೇ ಸಾಧಿತವಾಗದೆ?

**ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ**
**ನಾಯಿಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ**
**ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯ**

ಬಸವಣ್ಣನವರು ಪಾಪದ ಹಣವನ್ನು ನಾಯಿಯ ಹಾಲಿಗೆ ಹೋಲಿಸುತ್ತಾರೆ. ಇಂದಿನ ಆಧುನಿಕ ಭಾರತದ ಪ್ರಜೆಗಳಾದ ನಮ್ಮಲ್ಲಿ ಈ ಶ್ರದ್ಧೆ ನಿಷ್ಠೆ ಇದ್ದಿದ್ದರೆ ಯಾವ ಲೋಕಾಯುಕ್ತವೂ ಬೇಕಿರಲಿಲ್ಲ. ಆದರೆ ಇಂದು ಪಾಪದ ಹಣ ನಮಗೆ ನಾಯಿಯ ಹಾಲಾಗಿ ತೋರುತ್ತಿಲ್ಲ. ಕ್ಷೀರಸಾಗರವಾಗಿ ಅಮೃತವಾಗಿ ತೋರುತ್ತಿದೆ. ಏನಕೇನ ಪ್ರಕಾರೇಣ ಕೋಟಿ ಲೆಕ್ಕದಲ್ಲಿ ಹಣವನ್ನು ಗುಡ್ಡೆಯಾಗಿ ಪೇರಿಸುವ ವಿಚಿತ್ರ ಧನದಾಹ ಇಂದು ಕಂಡುಬರುತ್ತಿದೆ. ಒಬ್ಬ ವ್ಯಕ್ತಿ ಹೇಗೆ ಹಣ ಮಾಡಿಕೊಂಡ ಎಂಬ ವಿಚಾರವೂ ಮುಖ್ಯವಾಗುತ್ತಿಲ್ಲ. ಹಣವೇ ಜೀವನದ ಮೌಲ್ಯ ಎಂಬಂತಾಗಿ ಸಂಗ್ರಹದ ಇತಿಮಿತಿಗಳಿಗೂ ತಿಲಾಂಜಲಿ ನೀಡಲಾಗಿದೆ. ಬಸವಣ್ಣನವರು ಹೇಳುವ ಸತ್ಯ, ಸಹಜ, ಸದ್ಭಾವ, ಸದ್ವರ್ತನೆಗಳು ನಮ್ಮಲ್ಲಿ ಕೇವಲ ಭ್ರಷ್ಟಾಚಾರ ನಿಗ್ರಹವಾಗುವುದಷ್ಟೇ ಅಲ್ಲ, ಅತ್ಯಂತ ಸುಂದರವಾದ ಸಮಾನತೆಯ ತಳಹದಿಯ ಮೇಲೆ ಕಂಗೊಳಿಸುವ ಸಮಾಜ ನಮ್ಮದಾಗುವುದು. ಆದರೆ ಅದು ಸಾಧ್ಯವೇ? ಎಂಬುದೇ ಪ್ರಶ್ನೆ. ಈ ಪ್ರಶ್ನೆಗೆ ಸಾಧ್ಯ ಎಂದು ಉತ್ತರಿಸುವ ಧೈರ್ಯ, ನೈತಿಕ ಸ್ಥೈರ್ಯ ನಮಗಾರಿಗೂ ಇಲ್ಲದಾಗಿದೆ.

ಮಹಿಳೆಯನ್ನು ಪೂಜ್ಯ ದೃಷ್ಟಿಯಿಂದ ಕಂಡವರು ಬಸವಾದಿ ಪ್ರಮಥರು. ಈ ದೇಶದ ಮೊದಲ ಪಾರ್ಲಿಮೆಂಟ್ ಎನ್ನಿಸಿದ ಅನುಭವ ಮಂಟಪದಲ್ಲಿ ಮಹಿಳೆ ಪುರುಷರ ಸಮನಾಗಿ ಕುಳಿತು ಚರ್ಚೆಯಲ್ಲಿ ಪಾಲ್ಗೊಂಡಳಲ್ಲದೆ ವಚನ ರಚನೆಯನ್ನು ಮಾಡಿದಳು. ತಳಸಮುದಾಯದಿಂದ ಬಂದ ಮಹಿಳೆ ಬಸವಾದಿ ಶರಣರ ಸಮ್ಮುಖದಲ್ಲಿ ಜಾತಿಭೇದ ಲಿಂಗಭೇದಗಳನ್ನು ಕಿತ್ತೆಸೆದು ಚರ್ಚೆಯಲ್ಲಿ ಪಾಲ್ಗೊಂಡಳೆಂಬುದು ಒಂದು ಚಾರಿತ್ರಿಕ ವಿಸ್ಮಯ ಪವಾಡ. ಆದರೆ ಇಂದು ನಮ್ಮ ಪಾರ್ಲಿಮೆಂಟಿನಲ್ಲಿ ಮಹಿಳಾ ಪ್ರಾತಿನಿಧ್ಯ ಸಿಗಬೇಕಾದಷ್ಟು ಸಿಕ್ಕಿದೆಯೇ?

ಅದು ಬಿಡಿ, ಮಹಿಳೆಯೆನ್ನು ಇಂದು ನಮ್ಮ ದೇಶ ಗೌರವದಿಂದ ಕಾಣುತ್ತಿದೆಯೇ? ದೆಹಲಿಯಲ್ಲಿ ನಡೆದ ಅತ್ಯಾಚಾರ ಪ್ರಕರಣವೊಂದೆ ಸಾಕು, ನಮ್ಮ ನೈತಿಕ ದಿವಾಳಿತನ ಯಾವ ಮಟ್ಟದಲ್ಲಿದೆ ಎಂಬುದಕ್ಕೆ ಅದರ ಬೆನ್ನ ಹಿಂದೆ ನಡೆದ ದೇಶಾದ್ಯಂತ ಅತ್ಯಾಚಾರ ಪ್ರಕರಣಗಳು 'ಸಮೂಹ ಸನ್ನಿ' ಎಂಬಂತೆ ನಡೆದವು, ನಡೆಯುತ್ತಿವೆ, ಹೆಣ್ಣು "ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂಬ ಶರಣರ ಧೋರಣೆ, ಪರಸತಿಯನ್ನೊಲ್ಲೆನೆಂಬ ಛಲ, ಎಲ್ಲಂದದಲ್ಲೂ ಪುರುಷನಿಗೆ ಸರಿಸಮನಾದ ಸ್ಥಾನಮಾನಗಳನ್ನು ಮಹಿಳೆಗೆ ಕೊಟ್ಟ ಶರಣರ ವಿಚಾರಗಳನ್ನು ಮನದಂದು ಪರಿಪಾಲಿಸಿದರೆ ಮಹಿಳಾ ದೌರ್ಜನ್ಯಕ್ಕೆ ಮುಕ್ತಿ ಕಾಣಬಹುದು. ಆದರೆ ಇಂದು ಭಾರತ ದೇಶ ಹೆಣ್ಣಿಗೆ ಸುರಕ್ಷಿತವಲ್ಲದ ದೇಶ ಎಂಬುದಾಗಿ ಜಗತ್ತಿನ ಮುಂದೆ ತನ್ನ ಮಾನ ಹರಾಜಿಗಿಟ್ಟುಕೊಂಡಿದೆ. ಬಸವಾದಿ ಶರಣರು ನಡೆದಾಡಿದ ನೆಲ ಇದೇನಾ?

ಜಾತಿ ಎಂಬ ಭೂತ ನಮ್ಮ ದೇಶವನ್ನು ಬಿಟ್ಟು ಹೋಗಿಲ್ಲ. ಅಷ್ಟೇ ಅಲ್ಲ, ಮೊದಲಿಗಿಂತ ಈಗಿನ ಜಾತಿ ಸ್ವರೂಪ ಅಪಾಯಕಾರಿ ಬೆಳವಣಿಗೆಯಾಗಿದೆ. ಜಾತಿ ಆಧಾರಿತ ರಾಜಕಾರಣವೊಂದೇ ಅಲ್ಲ. ಜನರು ಕೂಡ ತಮ್ಮ ತಮ್ಮ ಜಾತಿಗೊಂದು ಸಂಘಟನೆ ಮಾಡಿಕೊಂಡು ದ್ವೀಪಗಳಾಗಿ ಒಡೆಯುತ್ತಿದ್ದಾರೆ. ಪ್ರಬಲ ಜಾತಿ, ದುರ್ಬಲ ಜಾತಿಗಳೆಂಬ ಎರಡು ಹೊಸ ವಿಂಗಡಣೆಗಳನ್ನಾಗಿ ನೋಡಬೇಕಾದ ಕಾಲ ದೂರವೇನಿಲ್ಲ. ಇಲ್ಲಿಯೂ ಮತ್ತದೇ ತಥಾಕಥಿತ ಶೋಷಣೆ, ದಬ್ಬಾಳಿಕೆ, ದೌರ್ಜನ್ಯ ಹುಟ್ಟಿಕೊಳ್ಳುತ್ತವೆ. ಯಾಕೆ ನಮಗೆ ಇಂದಿಗೂ ಕೇವಲ ಭಾರತೀಯರಾಗಿ ಬದುಕಲಾಗುತ್ತಿಲ್ಲ. ದೇಶಕ್ಕಿಂತ ಜಾತಿ, ಮತಗಳೇ ದೊಡ್ಡದಾಗಿ ಬಿಟ್ಟರೆ ಈ ದೇಶ ಒಗ್ಗಟ್ಟಾಗಿ, ಪ್ರಜಾಪ್ರಭುತ್ವದ ಹಳಿ ತಪ್ಪದೇ ಮುಂದೆ ಸಾಗುವುದೆಂಬ ಭರವಸೆಗೆ ಆತಂಕ ಒಡ್ಡುತ್ತದೆ. ಇದು ಇಂದಿನ ಆತಂಕಕಾರಿ ಬೆಳವಣಿಗೆ. ಶರಣರ ವಿಚಾರಗಳನ್ನು ಅರ್ಥೈಸಿಕೊಂಡು ಬದುಕಿದ್ದರೆ ಜಾತಿಗಳೇ ಇರುತ್ತಿರಲ್ಲಿಲ್ಲ.

“ಬಸವಣ್ಣನವರು ಅಸ್ಪೃಶ್ಯೋದ್ಧಾರ ಕಾರ್ಯವನ್ನು ಚಳುವಳಿಯ ರೂಪದಲ್ಲಿಯೇ ಪೂರೈಸಿರಬೇಕೆಂದು ತೋರುತ್ತದೆ. ಕಂಬಳಿ ನಾಗಿದೇವ ಮತ್ತು ಹರಳಯ್ಯ ಮಧುವರಸರ ಪ್ರಕರಣಗಳು ದಯಾಮಯನಾದ ಕಾಲಪುರುಷ ನಮಗಾಗಿ ಉಳಿಸಿಕೊಟ್ಟಿರುವ ಎರಡು ನಿದರ್ಶನಗಳು. ಇಂಥ ಘಟನೆಗಳು ಇನ್ನೂ ಅನೇಕ ನಡೆದಿರಬೇಕು. ಅವು ವಿಸ್ಮೃತಿಯ ಗರ್ಭದಲ್ಲಿ ಹೂತುಹೋಗಿರಬೇಕು, ಇಲ್ಲವೇ ಅವುಗಳನ್ನು ಆಗದವರು ಚಿಗುರಿನಲ್ಲಿಯೇ ಚಿವುಟಿರಬೇಕು. ‘ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ’, ಎನ್ನುವ ಅವರ ಹೊನ್ನುಡಿ ಎಲ್ಲ ಕಾಲಕ್ಕೂ ಎಲ್ಲ ದೇಶಗಳಿಗೂ ಬೇಧಾತೀತವಾಗಿ ನಿಲ್ಲುವ ವಿಶ್ವ ಸತ್ಯ.

ಅಸ್ಪೃಶ್ಯತಾ ನಿರ್ಮೂಲನ ಮತ್ತು ಜಾತಿವಿನಾಶವೆರಡು ಸಂಗತಿಗಳೂ ಪರಸ್ಪರ ಪ್ರತ್ಯೇಕವಲ್ಲ. ಅವೆರಡರಲ್ಲೊದು ಕೈಗೂಡಿದರೂ ಮತ್ತೊಂದು ತಾನೇತಾನಾಗಿ ಸಿದ್ಧಿಸುತ್ತದೆ. ಅಸ್ಪೃಶ್ಯತೆ ಭಯಂಕರ ಶಾಪವಾದದ್ದರಿಂದ, ಅದು ಹರಿದರೆ ಉಳಿದ ಸಮಸ್ಯೆಗಳು ತಾವಾಗಿಯೇ ಬಗೆಹರಿಯಬಹುದಾದ್ದರಿಂದ ಬಸವಣ್ಣನವರು ಆ ಬಗ್ಗೆ ವಿಶೇಷ ಗಮನಹರಿಸುತ್ತಾರೆ. ಜಾತಿವಿನಾಶವೇ ಸಮಾಜಾಭಿವೃದ್ಧಿಗೆ ಹಾಗೂ ಅಧ್ಯಾತ್ಮಸಿದ್ದಿಗೆ ಪ್ರಥಮ ಸೋಪಾನವೆಂದು ಎಂಟು ಶತಮಾನಗಳ ಹಿಂದೆಯೇ ಅರಿತುಕೊಂಡದ್ದು ಅವರ ಪ್ರತಿವಾದಿತನಕ್ಕೆ ಸಾಕ್ಷಿಯಾಗಿದೆ. ಜಾತಿ ಕುಲ ನಿರ್ಮಾಣವಾದದ್ದು ಹೇಗೆ? ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ; ವೇದವೋದಿ ಹಾರುವನಾದ. ಅಂತೆಯೇ ಅಡುಗೆ ಮಾಡಿ ಬಾಣಸಿಗನಾದ, ಇತ್ಯಾದಿ ಇದು ಸರಿಯೇ? ಬಸವಣ್ಣನವರ ಪ್ರಕಾರ ಎರಡೇ ಕುಲ; ಭವಿ, ಭಕ್ತ; ಲಿಂಗಭೇದವಿಲ್ಲ; ವರ್ಣವರ್ಗಗಳಿಲ್ಲ.

**ವ್ಯಾಸ ಬೋಯಿತಿಯ ಮಗ ; ಮಾರ್ಕಂಡೇಯ ಮಾತಂಗಿಯ ಮಗ,**
**ಮಂಡೋದರಿ ಕಪ್ಪೆಯ ಮಗಳು !**
**ಕುಲವರಸದಿರಿಂ ಭೋ, ಕುಲದಿಂದ ಮುನ್ನೆನಾದಿರಿಂ ಭೋ?**

ಎಂದವರು ಪ್ರಶ್ನಿಸುತ್ತಾರೆ. ‘ವರ್ಣಾನಾಂ ಬ್ರಾಹ್ಮಣೋ ಗುರು’ ಎಂಬುದು ಹುಸಿ; ‘ವರ್ಣಾನಾಂ ಗುರು ನಮ್ಮ ಕೂಡಲ ಸಂಗನ ಶರಣರು’ ನಿಜವಾದ ಲಕ್ಷ್ಮಿ, ಸರಸ್ವತಿವೊಲಿದರೆ ಕುಲವರನರಸಲಿದೇಕೆ ? ಆ ದೇವನೊಲಿದ ಭಕ್ತಂಗೆ ಇನ್ನಾವ ಮಂತ್ರವೇಕೆಯೊ?’ ಎಂಬ ಪ್ರಶ್ನೆಗೆ ವೇದಾಧ್ಯಾಯಿಗಳು ಉತ್ತರ ಹೇಳುವುದು ಕಷ್ಟ. ಲಿಂಗಾರಾಧನೆಯಂದ ಸಕಲ ವರ್ಣಗಳು ಮರೆಸಿ ಹೋಗುತ್ತವೆಂಬ ದೃಢನಿಲವುಳ್ಳ ಅವರು ‘ಕುಲವನರಸುವರೆ ಶರಣನಲ್ಲಿ ಜಾತಿ ಸಂಕರನಾದ ಬಳಿಕ?’ ಎಂದು ವಾಗ್ಬಾಣ ಹರಿಸುತ್ತಾರೆ. ಭಕ್ತರ ಕುಲವನರಸಿದೆ ತಲೆ ದಂಡವೆಂದು ಶಪಥಗೈಯುತ್ತಾರೆ.

**ವಿಪ್ರ ಮೊದಲು ಅಂತ್ಯಜ ಕಡೆಯಾಗಿ**
**ಶಿವಭಕ್ತರಾದರನೆಲ್ಲರನೊಂದೇ ಎಂಬೆ;**
**ಹಾರುವ ವೊದಲು ಶ್ವಪಚ ಕಡೆಯಾಗಿ**
**ಭವಿಯಾದವರನೊಂದೇ ಎಂಬೆ;**
**ಈ ಹೀಂಗೆಂದು ನಂಬುವುದೆನ್ನ ಮನವು.**
**ಈ ನುಡಿದ ನುಡಿಯೊಳಗೆ ಎಳ್ಳಮೊನೆಯಷ್ಟು ಸಂದೇಹವುಳ್ಳರೆ,**
**ಹಲುದೋರಿ ಮೂಗ ಕೊಯಿ, ಕೂಡಲ ಸಂಗಮದೇವಾ**

ಇದು ಅವರ ಪ್ರಾಮಾಣಿಕ ಪ್ರಾರ್ಥನೆ. ಆದರೆ ರಂಧ್ರಾನ್ವೇಷಕರು ಇಂಥ ವಚನಗಳಲ್ಲಿ ಮತಾಂತರ ಪ್ರಯತ್ನದ ಹೊಳಹನ್ನು ಕಾಣಬಯಸಿದರೆ ತಪ್ಪಾದೀತೆಂದೇ ಹೇಳಬೇಕಾಗುತ್ತದೆ. ಇತರ ಮತಗಳ ಸಂಕುಚಿತ ದೃಷ್ಟಿಯಿಂದಾಗಿ, ಅವು ಜಾತಿ ವರ್ಣಗಳನ್ನು ಪುರಸ್ಕರಿಸುತ್ತಿರಲಾಗಿ, ಅವುಗಳಿಂದ ಸಮಷ್ಟಿಚೇತನದ ಉದ್ಬೋಧವಾಗಲೀ, ಊರ್ಧ್ವಮುಖ ಸಂಚಲನೆಯಾಗಲೀ ಸಾಧ್ಯವಿಲ್ಲವೆಂಬ ಅವರ ತಿಳುವಳಿಕೆಯಲ್ಲಿ ಹುಸಿಯಿಲ್ಲ, ಜೀರ್ಣವಸ್ತ್ರಗಳಂತೆ ಹಳಸಲು ತಿಂಡಿಗಳಂತೆ

ಜೀರ್ಣತತ್ವಗಳೂ ಬಿಸಾಟಕ್ಕೆ ಯೋಗ್ಯವಾಗಿರುತ್ತವೆ. ಅಂದಿನ ನೂತನ ಮತಾವಿರ್ಭಾವದ ಹಿನ್ನೆಲೆಯಲ್ಲಿ, ಅದು ತನ್ನ ಮುಂದಿರಿಸಿಕೊಂಡ ಧ್ಯೇಯೋದ್ದೇಶಗಳ ಸಫಲತೆಯ ದೃಷ್ಟಿಯಿಂದ ಅಷ್ಟಾವರ್ಣಗಳ ಅವಶ್ಯಕತೆಗಳನ್ನು ಇತಿಮಿತಿಗಳನ್ನು ಕಟ್ಟುಪಾಡುಗಳನ್ನು ಗಮನಿಸಬೇಕಾಗುತ್ತದೆ" (ಬಸವ ಸಂಹಿತೆ, ಸಾಮಾಜಿಕ ಕ್ರಾಂತಿ, ದೇಜಗೌ, ಪು.೫೩-೫೪)

**ಸೆಟ್ಟಿಯೆಂಬೆನೆ ಸಿರಿಯಾಳನ?**
**ಮಡಿವಾಳನೆಂಬೆನೆ ಮಾಚಯ್ಯನ ?**
**ಡೋಹರನೆಂಬೆನೆ ಕಕ್ಕಯ್ಯನ ?**
**ಮಾದಾರನೆಂಬೆನೆ ಚೆನ್ನಯ್ಯನ ?**
**ಆನು ಹಾರುವನೆಂದರೆ ಕೂಡಲ ಸಂಗಮ ದೇವ ನಗುವನಯ್ಯ**

ಎಂದು ಹೇಳಿರುವುದು ವಚನಕಾರರು ಮೇಲು ಕೀಳಿಲ್ಲದ ಸಮಾಜವನ್ನು ಕಲ್ಪಿಸಿಕೊಂಡದ್ದು ಮಾತ್ರವಲ್ಲ ಪರಿಶುದ್ಧವಾದ ಸಮಾಜವನ್ನು ಅವರು ಆಪೇಕ್ಷಿಸಿದ್ದರು. ಅದಕ್ಕಾಗಿ ತಮ್ಮ ವಚನಗಳಲ್ಲಿ ಸಾಮಾನ್ಯ ಜನರಿಗೆ ನೀತಿಯ ಬೋಧನೆಯನ್ನು ಮಾಡಿದರು. ಧರ್ಮದ ತಿಳಿವನ್ನು ನೀಡಿದರು. ಡಾಂಭಿಕತೆಯನ್ನು ವಿಡಂಬಿಸಿದರು. ಅನಾಚಾರಗಳನ್ನು ಖಂಡಿಸಿದರು. ಆದರೆ ನಮ್ಮ ದುರಂತವೆಂದರೆ ಜಾತಿಯನ್ನು ಹೊಡೆದೋಡಿಸಲು ಜೀವನವಿಡಿ ಶ್ರಮಿಸಿದ ಶರಣರನ್ನು ಒಂದೊಂದು ಜಾತಿಗೆ ಸೀಮಿತಗೊಳಿಸಿ ಮಾತನಾಡುವ ಹಂತಕ್ಕೆ ನಾವು ತಲುಪಿರುವುದು. ವಿಗ್ರಹ ಪೂಜೆ ಬೇಡವೆಂದ ಶರಣರನ್ನೇ ಮೂರ್ತಿ ಮಾಡಿ ಪೂಜಿಸುವವರು ನಾವು. ಶರಣರಲ್ಲಿ ಯಾವ ಜಾತಿ ಭೇದಗಳೂ ಇರಲಿಲ್ಲ. ಭಕ್ತ ಮತ್ತು ಭವಿ ಎಂಬ ಎರಡು ವರ್ಗಗಳನ್ನು ಮಾತ್ರ ನಾವು ಕಾಣಬಹುದು ಸಂಸ್ಕಾರ ಪಡೆದು ಜಾತ್ಯಾತೀತನಾಗುವ ಭಕ್ತ, ಇನ್ನು ಆ ಸಂಸ್ಕಾರ ಪಡೆಯಲಿಚ್ಛಿಸದ ಭವಿ. ಭವಿ ತನ್ನ ಮನ ಪರಿವರ್ತನೆಯಿಂದ ಯಾವಾಗಬೇಕಾದರೂ ಭಕ್ತನಾಗಬಹುದು, ಜಾತಿ ವಿಷಯವಾಗಿ ಶರಣರು ಎಷ್ಟು ಶ್ರಮಿಸಿದರೆಂಬುದನ್ನು ಯಾರಿಗೂ ಹೇಳಬೇಕಿಲ್ಲ. ಅವರು ಮಾಡಿದ ಅಂತರ್ಜಾತಿ ವಿವಾಹವೇ ಸಾಕ್ಷಿ. ಆ ಕಾಲಕ್ಕೆ ಅದು (ವಿಲೋಮ ಅಂತರ್ಜಾತಿ ವಿವಾಹ) ದೊಡ್ಡ ಕ್ರಾಂತಿ. ಅರಗಿಸಿಕೊಳ್ಳಲಾಗದ ಪಟ್ಟ ಭದ್ರರು ಸಂಪ್ರದಾಯ ಶರಣರು ಶರಣರನ್ನು ಹಿಂಸಿಸಿದರು. ಇಂತಹದೊಂದು ಸಮಗ್ರ ಕ್ರಾಂತಿ ಆ ಕಾಲದಲ್ಲಿ ವಿಶ್ವದಲ್ಲಿ ಎಲ್ಲಿಯಾದರೂ ನಡೆದಿದೆಯೇ? ಇಲ್ಲ. ಆ ಕಾಲದಲ್ಲಿ ಅಲ್ಲ ಮುಂದಿನ ಯಾವ ಕಾಲದಲ್ಲೂ ಸಮಗ್ರ ಸ್ವರೂಪದ ಕ್ರಾಂತಿಯಾಗಿಯೇ ಇಲ್ಲ. ಇಂದು ಬಸವಾದಿ ಶರಣರ ನುಡಿಗಡಣ ಭಾರತ ದೇಶೊದ್ಧಾರಕ್ಕೆ ಬೀಜಮಂತ್ರಗಳಾಗಬಲ್ಲವು. ಬಹಳ ಮುಂದುವರಿದಿದ್ದೇವೆ ಎನ್ನುವ ನಾವು ನೈತಿಕವಾಗಿ ಸಾಮಾಜಿಕವಾಗಿ ಯಾವ ದಿಶೆಯಲ್ಲಿ ನಡೆಯುತ್ತಿದ್ದೇವೆ ಎಂಬುದನ್ನು ಗಮನಿಸಿದರೆ ನಾಚಿಕೆಯಾಗುತ್ತದೆ. ಬಸವಣ್ಣನಂತಹ ಅಪರೂಪರಲ್ಲಿ ಅಪರೂಪವಾದ ಮಹಾನ್ ಚೈತನ್ಯ ಮತ್ತೊಮ್ಮೆ ಹುಟ್ಟಿ ಬರಬಾರದೆ ಎನ್ನಿಸುತ್ತದೆ. ಹುಟ್ಟಿ ಬರುವ ಬಿಡುವ ಮಾತು ಒತ್ತಟ್ಟಿಗಿರಲಿ. ಬಸವಣ್ಣನವರು ತಾವು ಕಟ್ಟಬಯಸಿದ ಸಮಾಜದ ಕನಸು ನುಚ್ಚು ನೂರಾಗಿ ರಕ್ತ ಕ್ರಾಂತಿಯಾದಾಗ ಅವರು ಅನುಭವಿಸಿದ ನೋವು ಯಾತನೆ ಹೇಗಿದ್ದವು? ಬಸವಣ್ಣನವರು ತಮ್ಮ ವಚನದ ಮೂಲಕ ಹೀಗೆ ಹೇಳುತ್ತಾರೆ.

**ನಾನು ಬಂದ ಕಾರ್ಯಕ್ಕೆ ನೀವು ಬಂದಿರಯ್ಯ**
**ನೀವು ಬಂದ ಕಾರ್ಯಕ್ಕೆ ನಾನು ಬಂದೆನಯ್ಯ**
**ನಾನು ನೀವು ಬಂದ ಕಾರ್ಯಕ್ಕೆ ಪ್ರಭುದೇವರು ಬಂದರಯ್ಯ**
**ಕಲ್ಯಾಣವೆಂಬುದು ಪ್ರಣತೆಯಾಯಿತ್ತು**
**ನಾನು ತೈಲವಾದೆನು ನೀವು ಬತ್ತಿಯಾದಿರಿ**
**ಪ್ರಭುದೇವರು ಜ್ಯೋತಿಯಾದರು**
**ಪ್ರಣತೆ ಒಡೆದಿತ್ತು ತೈಲ ಚೆಲ್ಲಿತ್ತು**
**ಬತ್ತಿ ಬಿದ್ದಿತ್ತಯ್ಯ ಜ್ಯೋತಿ ನಂದಿತ್ತು**

**ಕೂಡಲಸಂಗನ ಶರಣರ ಮನ ನೊಂದಿತಯ್ಯ**

ಎಂದು ಅವರು ನೊಂದು ನುಡಿದಿದ್ದಾರೆ. ಅಂದು ಜ್ಯೋತಿ ನಂದಲು ಕಾರಣವಾದ ದುಷ್ಟ ಶಕ್ತಿಗಳೆ ನಮ್ಮ ದೇಶವನ್ನು ಹಿಂಡುವ ಅಸುರೀ ಶಕ್ತಿಗಳಾಗಿ ಪರಿಣಮಿಸಿವೆ. ಜನಲೋಕಪಾಲ ಮಸೂದೆ ಹಳ್ಳ ಹಿಡಿದಿದೆ. ದೇಶ ಭಕ್ತರು ಕಣ್ಮರೆಯಾಗಿ ದೇಶಭಕ್ಷಕರು ಕಣ್ಮುಂದೆ ನರ್ತಿಸುತ್ತಿದ್ದಾರೆ. ಬಸವಣ್ಣನವರು ವಿತ್ತ ಮಂತ್ರಿಗಳಾಗಿ, ಪ್ರಧಾನಿಗಳಾಗಿ ಶುದ್ಧ ರಾಜಕಾರಣ ಮಾಡಿ ಆದರ್ಶರಾಗಿದ್ದಾರೆ. ಅವರು ಕಂಡ ಕನಸು ಯಾವುದು? ಇಂದಿನ ರಾಜಕಾರಣಿಗಳು ಕಾಣುತ್ತಿರುವ ಕನಸು ಯಾವುದು? ರಾಜಕಾರಣಿಗಳನ್ನು ಬಿಡಿ, ಧರ್ಮ ಸೂತ್ರ ಕೈಯಲ್ಲಿ ಹಿಡಿದಿರುವವರಲ್ಲೂ ಲಾಂಛನಧಾರಿಗಳಾಗಿ ಬಸವಣ್ಣನವರ ವಿಚಾರಗಳನ್ನು ಬರಿಬಾಯಿಂದ ಅಣಿಮುತ್ತುಗಳಂತೆ ಉದುರಿಸುತ್ತ ಆಸ್ತಿ ಹಣ ಸಂಪಾದನೆ ಮಾಡುತ್ತ, ವೇಷಡಂಭಕರಾಗಿ ಬದುಕುತ್ತಿರುವ ಸ್ವಾಮಿಗಳು ಎಷ್ಟಿಲ್ಲ ಹೇಳಿ? ಯಾರಿಂದ ನಾವು ಸಾಮಾಜಿಕ ಸಮಾನತೆ, ಸಾಮಾಜಿಕ ನ್ಯಾಯವನ್ನು ನಿರೀಕ್ಷಿಸಬೇಕು?

**ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ**
**ಧರೆ ಹತ್ತಿ ಉರಿದಡೆ ನಿಲಲುಬಾರದು**
**ಏರಿ ನೀರುಂಬಡೆ ಬೇಲಿ ಕೆಯ್ಯ ಮೇವಡೆ**
**ನಾರಿ ತನ್ನ ಮನೆಯಲ್ಲಿ ಕಳುವಡೆ**
**ತಾಯ ಮೊಲೆವಾಲು ನಂಜಾಗಿ ಕೊಲುವಡೆ**
**ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ**

ಎಂಬ ಸ್ಥಿತಿ ನಮ್ಮದಾಗಿದೆ. ಆದ್ದರಿಂದ ಬಸವತತ್ವವನ್ನು ಅಳವಡಿಸಿಕೊಂಡ ಪ್ರಾಮಾಣಿಕ, ನಿಸ್ವಾರ್ಥಿ, ಸದೃಢ ಯುವ ಸಮುದಾಯ ನಮಗೆ ಬೇಕಾಗಿದೆ. ಉನ್ನತವಾದ ಆದರ್ಶಗಳನ್ನು ಧ್ಯೇಯ ಉದ್ದೇಶಗಳನ್ನು ನಮ್ಮ ದೇಶದಲ್ಲಿ ಅನುಷ್ಠಾನಗೊಳಿಸಲು ಇಂತಹ ನೂರಾರು ಯುವ ಪಡೆಗಳು ಸಿದ್ದವಾಗಬೇಕಿದೆ. ಬಸವಣ್ಣನವರು ಕಟ್ಟ ಬಯಸಿದ ಸರ್ವ ಸಮಾನತೆಯ ದೇಶವನ್ನು ಈ ಪಡೆಗಳು ಕಟ್ಟುತ್ತವೆ ಎನ್ನುವ ಭರವಸೆ ನಮ್ಮದು. ಬಸವಣ್ಣನವರ ತತ್ವಗಳು ಗಾಂಧೀ, ಅಂಬೇಡ್ಕರ ತತ್ವಗಳನ್ನು ತನ್ನ ಒಡಲೊಳಗೆ ಗರ್ಭೀಕರಿಸಿಕೊಂಡು ಅದರಾಚೆಗೂ ವಿಚಾರಿಸುವ ವಿಶ್ವವಿಶಾಲ ತತ್ವಗಳಾಗಿವೆ ಎಂಬುದನ್ನು ನಾವು ಮರೆಯಬಾರದು.

ಒಟ್ಟಿನಲ್ಲಿ ಆಧುನಿಕ ಭಾರತಕ್ಕೆ ಬಸವಣ್ಣನವರ ಸರ್ವಸಮಾನತೆಯ ತತ್ವಗಳು ಇಂದಿಗೂ ಅನ್ವಯಿಕವಾಗಿವೆ. ಇದು ದೂರದಿಂದ ಎಳೆದು ತಂದ ದೂರಾನ್ವಯವಲ್ಲ. ಇರುವ ಸತ್ಯ. ಸಾರ್ವಕಾಲಿಕವಾದ, ಸಾರ್ವತಿಕವಾದ ವಿಚಾರಗಳು ಯಾರವೇ ಆಗಿರಲಿ ಅವು ಯುಗಧರ್ಮವನ್ನು ಮೀರಿ ಬೆಳಗುವ ಚೈತನ್ಯವನ್ನು ಪಡೆದಿರುತ್ತವೆ. ಬಸವಣ್ಣನವರ ವಿಚಾರಗಳು ಆ ಬೆಳಗಿನ ಚೈತನ್ಯವನ್ನು ಹೊಂದಿದ ವಿಶ್ವ ಸತ್ಯಗಳಾಗಿವೆ. ಯಾವ ನಿಕಷಕ್ಕೆ ಒಡ್ಡಿ ಪರೀಕ್ಷಿಸಿದರೂ ಚೊಕ್ಕಚಿನ್ನವಾಗಿ ಕಂಗೊಳಿಸುತ್ತವೆ. ಬಸವಣ್ಣನವರ ಬದುಕು ಅತ್ಯಂತ ಪಾರದರ್ಶಕವಾಗಿದ್ದು, ಸಮಾಜ ಸುಧಾರಣೆಯೊಂದೆ ಅವರ ಉದ್ದೇಶವಾಗಿದ್ದಿತು. ಇಂದು ಬಸವಣ್ಣನವರನ್ನು ನಾವು ದೇಹರೂಪದಲ್ಲಿ ಕಾಣಲಾರೆವಾದರೂ ಅವರು ಕೊಟ್ಟು ಹೋದ ವಿಚಾರಗಳು ತವನಿಧಿಯಾಗಿ ನಮ್ಮ ಮುಂದಿವೆ. ಅವುಗಳನ್ನು ಅನುಷ್ಠಾನಗೊಳಿಸುವ ಸರ್ವ ಪ್ರಯತ್ನಗಳು ನಡೆಯಬೇಕಿದೆ, ಅಷ್ಟೇ.

**ಗ್ರಂಥಋಣ :**

೧. ಡಾ.ಎಂ.ಎಂ.ಕಲಬುರ್ಗಿ (ಸಂ), ಬಸವಣ್ಣನವರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೧೯೯೮

೨. ದೇಜಗೌ, ಬಸವ ಸಂಹಿತೆ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೪